Rotary

# JASMINE

ಜಾಸ್ಮಿನ್

जास्मिन

WEEKLY BULLETIN OF ROTARY CLUB KUNDAPURA SOUTH

Charter No. 23496 | Zone 1, R. I. Dist. 3182 | Charter Date : 04-03-1986




THE MAGIC OF ROTARY



**Rtn. Dr. Stephanie Urchick**
R. I. President



**Rtn. MPHF CA Dev Anand**
Dist. Governor



**Rtn. Judith Mendonca**
President



**Rtn. Dr. Rajendra Shetty**
Asst. Governor



**Rtn. Bharath Shetty**
Secretary



**Rtn. Mahendr Shetty**
Zonal Lieutenant



**Rtn. Dr. Anulekha Bayari**
Bulletin Editor


Volume 39 Issue - 46 08th May 2025


## ಸೌಂದರ್ಯವರ್ಧಕ ವೈದ್ಯಕೀಯ ಚಿಕಿತ್ಸೆಗಳು

ಮುಖ್ಯ ಅತಿಥಿ :
ರೊ. ಡಾ. ಉಮೇಶ್ ಪುತ್ರನ್

Time : 7.00 p.m.
Venue : Hotel Shivaprasad Grand, Kundapura

**39th year of Service and Fellowship**

# ವಾರದ ವರದಿ

















ತಾರೀಕು 01–05–2025ರಂದು ನಮ್ಮ ಕ್ಲಬ್ಬಿನ ಸಾಪ್ತಾಹಿಕ ಸಭೆಯನ್ನು ಹೋಟೆಲ್ ಶಿವಪ್ರಸಾದ್ ಗ್ರ್ಯಾಂಡ್‌ನ ಸಭಾಂಗಣದಲ್ಲಿ ರೋಟರಿ ಕ್ಲಬ್ ಕುಂದಾಪುರದವರೊಂದಿಗೆ ಜಂಟಿ ಸಭೆಯಾಗಿ ಆಯೋಜಿಸಲಾಗಿತ್ತು. ಈಗ ನಮ್ಮ Dist. 3182ದಿಂದ ಅಂತರಾಷ್ಟ್ರೀಯ COL ಗೆ ಮೂರು ವರ್ಷಗಳ ಅವಧಿಗೆ ಆಯ್ಕೆಯಾಗಿ ಕಾರ್ಯನಿರ್ವಹಿಸುತ್ತಿರುವ ಪಿಡಿಜಿ ರೊ. ಸದಾನಂದ ಚಾತ್ರರವರು ಕಳೆದ ತಿಂಗಳಿನಲ್ಲಿ ಅಮೇರಿಕದ ಚಿಕಾಗೋದಲ್ಲಿ ನಡೆದ ಅಂತರಾಷ್ಟ್ರೀಯ COL ಸಭೆಗೆ ಭಾಗಿಯಾಗಿ ಅಲ್ಲಿ ನಡೆದ ಸಭೆಯ ನಡವಳಿಕೆಗಳನ್ನು ಹಾಗೂ COL ನ ಕಾರ್ಯಚಟುವಟಿಕೆಗಳ ಬಗ್ಗೆ ಹೆಚ್ಚಿನ ಸದಸ್ಯರಿಗೆ ಮಾಹಿತಿಯನ್ನು ಮೂಡಿಸಲು ಅಂದಿನ ಸಭೆಯನ್ನು ನಮ್ಮ ಅಧ್ಯಕ್ಷರಾದ ರೊ. ಜುಡಿತ್ ಮೆಂಡೋನ್ಸಾರವರು ರೋಟರಿ ಕ್ಲಬ್ ಕುಂದಾಪುರದವರೊಂದಿಗೆ ಜಂಟಿಯಾಗಿ ನಡೆಸಲು ಆಯೋಜಿಸಿದ್ದರು. ಸಭೆಗೆ ಆಗಮಿಸಿದ್ದ ರೋಟರಿ ಕ್ಲಬ್ ಕುಂದಾಪುರದ ಅಧ್ಯಕ್ಷರಾದ ರೊ. ಲಿಯಾಕತ್ ಅಲಿಯವರನ್ನು, ಕಾರ್ಯದರ್ಶಿ ರೊ. ಸತೀಶ್ ಕೊತ್ವಾಲ್‌ರವರನ್ನು, ಅತಿಥಿ ಪಿಡಿಜಿ ರೊ. ಸದಾನಂದ ಚಾತ್ರರವರನ್ನು ಹಾಗೂ ಆಗಮಿಸಿದ್ದ ಉಭಯ ಕ್ಲಬ್‌ಗಳ ಸದಸ್ಯರನ್ನು ಅಧ್ಯಕ್ಷೆ ರೊ. ಜುಡಿತ್ ಮೆಂಡೋನ್ಸಾರವರು ಆತ್ಮೀಯವಾಗಿ ಸ್ವಾಗತಿಸಿದರು. ರೊ. ಶ್ರೀನಿವಾಸ ಶೇಟ್‌ರವರ ಪ್ರಾರ್ಥನೆಯೊಂದಿಗೆ ಸಭೆಯನ್ನು ಪ್ರಾರಂಭಿಸಲಾಯಿತು. ಹಂಗಾಮಿ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸಿದ ರೊ. ವಿವಿಯನ್ ಕ್ರಾಸ್ಟೋರವರು ಕಳೆದ ವಾರದ ವರದಿಯನ್ನು ನೀಡಿದರೆ, ರೊ. ಸತೀಶ್ ಕೋತ್ವಾಲ್‌ರವರು ರೋಟರಿ ಕ್ಲಬ್ ಕುಂದಾಪುರದ ಕಳೆದ ವಾರದ ವರದಿಯನ್ನು ಸಭೆಯನ್ನು ಮಂಡಿಸಿದರು.

ವಾರದ ಚಿಂತನೆಯನ್ನು ನೀಡಿದ ರೊ. ದೋ. ಮ. ಚಂದ್ರಶೇಖರ್‌ರವರು "ನಾವು ನಮ್ಮ ಬದುಕಿನಲ್ಲಿ ಸಂಸ್ಕಾರವಂತರಾಗಬೇಕಾದರೆ ಯಾವುದರ ಕುರಿತು ಗುರಿಯನ್ನು ಇಡಬೇಕೆಂದು" ತಿಳಿಸಿದರು. ರೋಟರಿ ಮಾಹಿತಿ ನೀಡಿದ ರೊ. ಕೆ. ಕೆ. ಕಾಂಚನ್‌ರವರು ರೋಟರಿ ಇಂಟರ್‌ನ್ಯಾಶನಲ್‌ನ ಅಂಗ ವಿಭಾಗವಾಗಿರುವ COL ಅಂದರೆ ಏನು? ಎನ್ನುವ ಬಗ್ಗೆ ಹಾಗೂ ಅದರ ಕಾರ್ಯವೈಖರಿಯ ಬಗ್ಗೆ ಸವಿಸ್ತಾರವಾದ ವಿವರವನ್ನು ನೀಡಿದರು. ಅತಿಥಿಯಾಗಿ ಸಭೆಗೆ ಆಗಮಿಸಿದ್ದ ಪಿಡಿಜಿ. ರೊ. ಸದಾನಂದ ಚಾತ್ರರವರನ್ನು ಔಪಚಾರಿಕವಾಗಿ ಪರಿಚಯಿಸಿದ ಅಧ್ಯಕ್ಷೆ ರೊ. ಜುಡಿತ್ ಮೆಂಡೋನ್ಸಾ ರವರು ಪಿಡಿಜಿ ರೊ. ಸದಾನಂದ ಚಾತ್ರರವರು ಹಿರಿಯ ರೊಟೇರಿಯನ್ನರಾದರೂ ನನಗೆ ಈ ವರ್ಷ ಎಲ್ಲಾ ರೀತಿಯಲ್ಲೂ ಸಹಕರಿಸಿ ಯಾವುದೇ ಸಮಯದಲ್ಲಿ ಕರೆ ಮಾಡಿದ್ದಲ್ಲೂ ತಾಳ್ಮೆಯಿಂದ ಹಾಗೂ ಅತೀವ ಸೌಜನ್ಯದಿಂದ ಸಲಹೆಗಳನ್ನು ನೀಡುವ ಅವರು ಹಾಗೂ ರೋಟರಿ ತಮಗೆ ನೀಡಿದ ಯಾವುದೇ ಜವಾಬ್ದಾರಿಯನ್ನು ಅತೀವ ನಿಗಾ ವಹಿಸಿ ನಿಭಾಯಿಸುವ ಅವರ ವ್ಯಕ್ತಿತ್ವದಿಂದ ತಾನು ಬಹಳಷ್ಟು ಪ್ರಭಾವಿತಗೊಂಡಿದ್ದೇನೆ ಎಂದು ಪರಿಚಯಿಸಿದರು. ಮುಂದೆ COL (Council of Legislation) ನ ಬಗ್ಗೆ ಮಾತನಾಡಿದ ಪಿಡಿಜಿ ರೊ. ಎಸ್. ಸದಾನಂದ ಚಾತ್ರರವರು ಪ್ರಪಂಚದಲ್ಲಿರುವ ರೋಟರಿಯ 515 Dist. ಗಳಿಂದ ತಲಾ ಒಬ್ಬರು ಭಾಗವಹಿಸಲು ಅವಕಾಶವಿರುವ ಈ ಸಭೆಯಲ್ಲಿ ಈ ವರ್ಷ 485 ಪ್ರತಿನಿಧಿಗಳು 4 ದಿನಗಳ ಸಭೆಯಲ್ಲಿ ಭಾಗವಹಿಸಿದ್ದು, 86 ನಿರ್ಣಯಗಳನ್ನು ಸಭೆಯಲ್ಲಿ ಪ್ರಸ್ತಾಪಿಸಲಾಗಿತ್ತು. ಪ್ರತೀ ನಿರ್ಣಯಗಳು ಪಾಸ್‌ಆಗಬೇಕಾದರೆ 2/3ರ ಬಹುಮತವನ್ನು ಪಡೆಯಲೇ ಬೇಕು. ನಿರ್ಣಯದ ಮತ ಚಲಾವಣೆ ಡಿಜಿಟಲ್ ವ್ಯವಸ್ಥೆಯಲ್ಲಿರುವುದರಿಂದ ಮತ ಚಲಾವಣೆಯಾದ ಕೂಡಲೇ ಪರ ಹಾಗೂ ವಿರೋಧದ ಫಲಿತಾಂಶ ಅದೇ ಕೂಡಲೇ ಪರದೆಯ ಮೂಲಕ ಸ್ಪಷ್ಟವಾಗಿ ತಿಳಿಸಲಾಗುತ್ತಿತ್ತು. ಯಾವುದೇ ನಿರ್ಣಯವನ್ನು ಸೂಚಿಸುವವರ ಹೆಸರು ಕ್ಲಬ್ ಹಾಗೂ Dist. ನ್ನು ಸ್ಪಷ್ಟವಾಗಿ ಪರದೆಯ ಮೂಲಕ ಗೋಚರಿಸಲಾಗುತ್ತಿತ್ತು. ಎಷ್ಟೇ ಉನ್ನತ ಹುದ್ದೆಯಲ್ಲಿರುವ ವ್ಯಕ್ತಿ ಕೂಡಾ ನಿಗದಿಗೊಳಿಸಲಾದ ಸಮಯಕ್ಕಿಂತ ಜಾಸ್ತಿ ಹೊತ್ತು ಮಾತನಾಡಿದರೆ Mike ತನ್ನಷ್ಟಕ್ಕೆ Off ಆಗುವಂತಹ ವ್ಯವಸ್ಥೆಯನ್ನು ವ್ಯವಸ್ಥಿತರು ರೂಪಿಸಿದುದರಿಂದ ಸಮಯದ ಪರಿಪಾಲನೆ ಅತ್ಯದ್ಭುತವಾಗಿತ್ತು. ನಮ್ಮ Dist. ನಿಂದ ಯಾವುದೇ ಸೂಚನೆಗಳಿರಲಿಲ್ಲ. ಆದರೆ Dist. 3181ನಿಂದ ರೋಟರ್‍ಯಾಕ್ಟ್ ಸದಸ್ಯರ ವಯೋಮಿತಿಯ ಬಗ್ಗೆ ಒಂದು ಸೂಚನೆ ಇದ್ದಿದ್ದರೂ ಅದು ಅಂಗೀಕಾರಗೊಳ್ಳಲಿಲ್ಲ. ಹೀಗೆ ಹಲವು ವಿಚಾರಗಳನ್ನು ಸವಿವರವಾಗಿ ಸಭೆಗೆ ತಿಳಿಸಿದ ರೊ. ಸದಾನಂದ ಚಾತ್ರರವರು ಅದ್ಭುತ ಅನುಭವವನ್ನು ನೀಡಿದ ಈ ಸಭೆಯಲ್ಲಿ ಭಾಗವಹಿಸಲು ಅವಕಾಶವನ್ನು ನೀಡಿದ

Dist. 3182ನ ನಾಯಕರುಗಳಿಗೆ ಹಾಗೂ ಪ್ರೋತ್ಸಾಹ ನೀಡಿದ ನನ್ನ ಕ್ಲಬ್ಬಿನ ಎಲ್ಲರಿಗೂ ನಾನು ಋಣಿ ಎಂದು ಮಾತು ಮುಗಿಸಿದರು.



ಅತಿಥಿಗಳ ಭಾಷಣದ ನಂತರ ಕಾರ್ಮಿಕರ ದಿನಾಚರಣೆಯ ಅಂಗವಾಗಿ ಉಪ್ಪಿನಕುದ್ರುವಿನ 8 ಜನ ಯುವಕರ "ಶೌರ್ಯ ತಂಡ"ದ 4 ಸದಸ್ಯರನ್ನು ಎರಡೂ ಕ್ಲಬ್‌ಗಳ ಅಧ್ಯಕ್ಷರುಗಳು ಎಲ್ಲಾ ಸದಸ್ಯರ ಸಮಕ್ಷಮದಲ್ಲಿ ಗೌರವಿಸಿದರು. ನಂತರ ಮಾತನಾಡಿದ ರೊ. ಜುಡಿತ್ ಮೆಂಡೋನ್ಸಾರವರು ತಲ್ಲೂರು ಪರಿಸರದಲ್ಲಿರುವ ಈ ಯುವಕರು ಚಿಕ್ಕ ಪುಟ್ಟ ವೃತ್ತಿಗಳಲ್ಲಿದ್ದರು ಜಾತಿ ಮತ ಭೇದವಿಲ್ಲದ ತಂಡವನ್ನು ಕಟ್ಟಿಕೊಂಡು ಸಮಾಜದಲ್ಲಿ ಆಪತ್ಕಾಲದ ಸೈನಿಕರಾಗಿ ಬಾವಿಯಲ್ಲಿ ಬಿದ್ದವರನ್ನು ಎತ್ತುವುದು, ನೆರೆಯಲ್ಲಿ ಕೊಚ್ಚಿ ಹೋಗುವವರನ್ನು ರಕ್ಷಿಸುವುದು, ಮನೆಗೆ ನುಗ್ಗಿದ ಹಾವು ಹೆಬ್ಬಾವುಗಳನ್ನು ಹಿಡಿದು ಸುರಕ್ಷಿತ ಸ್ಥಳದಲ್ಲಿ ಬಿಟ್ಟು ಮನೆಯವರ ಆತಂಕವನ್ನು ನಿವಾರಿಸುವುದು, ಮನೆಗಳ ಹಾಗೂ ರಸ್ತೆಗಳ ಮೇಲೆ ಬಿದ್ದ ಮರಗಳನ್ನು ತಕ್ಷಣ ತೆರವುಗೊಳಿಸಿ ಸಹಾಯ ಮಾಡುವುದು, ಮೃತ ಅನಾಥರಿಗೆ ಗತಿ ಕಾಣಿಸುವುದು ಇಂತಹ ಹಲವಾರು ಕಾರ್ಯಗಳನ್ನು ಯಾವುದೇ ಪ್ರತಿಫಲಾಪೇಕ್ಷೆ ಇಲ್ಲದೇ ನಿರಂತರವಾಗಿ ಮಾಡುತ್ತಿರುವ ಇಂತಹ ತಂಡಗಳು ಪ್ರತೀ ಗ್ರಾಮಗಳಲ್ಲಿ ರೂಪುಗೊಳ್ಳಲಿ ಎಂದು ಹಾರೈಸಿದರು. ಪ್ರತಿಯಾಗಿ ಶೌರ್ಯ ತಂಡದ ಶ್ರೀ ಮಂಜುನಾಥ್‌ರವರಿಗೆ ಸಭೆಯನ್ನು ಉದ್ದೇಶಿಸಿ ಮಾತನ್ನಾಡುತ್ತಾ "ಬರೇ ಮನಃಶಾಂತಿಗಾಗಿ ನಾವು ಮಾಡುತ್ತಿರುವ ಕಾರ್ಯಗಳನ್ನು ರೋಟರಿಯವರು ಗುರುತಿಸಿ, ಗೌರವಿಸಿದುದರಿಂದ ನಮ್ಮ ತಂಡದ ಜವಾಬ್ದಾರಿ ಇನ್ನೂ ಹೆಚ್ಚಾಯಿತು ಎಂದು ನಾವು ಭಾವಿಸುತ್ತೇವೆ." ಎಂದರು. ರೋಟರಿ ಕ್ಲಬ್ ಕುಂದಾಪುರದ ಅಧ್ಯಕ್ಷರಾದ ರೊ. ಲಿಯಾಕತ್ ಅಲಿಯವರು ಮಾತನ್ನಾಡುತ್ತಾ ಕುಂದಾಪುರ ದಕ್ಷಿಣ ರೋಟರಿಯವರೊಂದಿಗೆ ಜಂಟಿಯಾಗಿ ನಡೆದ ಈ ಸಭೆ ನನಗೆ ಹೊಸ ಅನುಭವವನ್ನು ನೀಡಿದ್ದಲ್ಲದೇ ಇಂತಹ ಜಂಟಿ ಸಭೆಗಳ ಮೂಲಕ ನಮ್ಮೊಳಗಿನ ಭ್ರಾತೃತ್ವ ಇನ್ನೂ ಹೆಚ್ಚಲಿ ಎಂದು ಹಾರೈಸಿದರು. ತಲ್ಲೂರು ಗ್ರಾಮ ಪಂಚಾಯತ್ ಅಧ್ಯಕ್ಷರಾದ ಶ್ರೀ ಗಿರೀಶ್ ನಾಯಕ್ ಉಪಸ್ಥಿತರಿದ್ದರು. ಅಂದಿನ ಸಭೆಯಲ್ಲಿ ಲಕ್ಕಿ ರೊಟೇರಿಯನ್ ಆಗಿ ರೊ. ಸರ್ವೋದಯ ಪೂಜಾರಿಯವರು ಆಯ್ಕೆಯಾದರು. ರೊ. ಜೆರಾಲ್ಡ್ ಕ್ರಾಸ್ಟೋರವರು ನಗೆ ಬುಗ್ಗೆಯನ್ನು ಸಿಡಿಸಿ ರಂಜಿಸಿದರು. ರೋಟರಿ ಕ್ಲಬ್ ಕುಂದಾಪುರದ ಕಾರ್ಯದರ್ಶಿ ರೊ. ಸತೀಶ್ ಕೋತ್ವಾಲ್‌ರವರು ಎಲ್ಲರಿಗೂ ಧನ್ಯವಾದಗಳನ್ನು ನೀಡಿದ ಮೇಲೆ ರಾಷ್ಟ್ರಗೀತೆಯೊಂದಿಗೆ ಸಭೆಯನ್ನು ಸಮಾಪ್ತಿಗೊಳಿಸಲಾಯಿತು.

## Rotary Information

### Council on Legislation (COL)

Council on Legislation (COL) is the lighest decision making body of the RI for ammending the MOP and Bye Laws. COL is held once in 3 years at the Rotary International Head Quarters at Chicago. It is to be represented by the duly elected Representation of the each Rotary District. This year our PDG Rtn. Sadananda Chatra has represented our Dist. 3182.

**By Rtn. K. K. Kanchan**

### ಕಳೆದ ವಾರದ ಚಿಂತನೆ

ಬದುಕು ಎಂಬುದು ಯಾವುದರ ಕುರಿತು : ಶ್ರೀಮಂತರಾಗುವುದರ ಕುರಿತು ಅಲ್ಲ; ಪ್ರಸಿದ್ಧರಾಗುವುದರ ಕುರಿತು, ಅಲ್ಲ ; ಉನ್ನತ ಶಿಕ್ಷಣ ಪಡೆಯುವುದರ ಕುರಿತು, ಅಲ್ಲ; ಪ್ರಬುದ್ಧರಾಗುವುದರ ಕುರಿತು, ಅಲ್ಲ; ನೈಜತೆ, ಪ್ರಾಮಾಣಿಕತೆ, ದಯೆ, ಇವುಗಳನ್ನು ಮೈಗೂಡಿಸಿಕೊಳ್ಳುವುದರ ಕುರಿತು – ಹೌದು. **ನೀಡಿದವರು – ರೊ. ದೋಮ ಚಂದ್ರಶೇಖರ್**



Our beloved Past Governor Rtn.Abinandan Shetty has been appointed as Strategic Planning Committee Member of Rotary International.He is one of the 8 members decision making Committee.This coveted assignment is for a period of 4 years.We are proud of him n wish many more higher assignments may come on his way.

### ಹುಟ್ಟುಹಬ್ಬದ ಶುಭಾಶಯಗಳು



**ರೊ. ಎಸ್. ಜಿ. ಪ್ರಸನ್ನ ಐತಾಳ್**
**ದಿನಾಂಕ : ಮೇ 7**
**ಮೊಬೈಲ್ : 9632171955**



**ರೊ. ಸಚಿನ್ ನಕ್ಕತ್ತಾಯ**
**ದಿನಾಂಕ : ಮೇ 13**
**ಮೊಬೈಲ್ : 9343953909**

**ರೊ. ಮಾಜಿ ಅಧ್ಯಕ್ಷ ಕೆ.ಟಿ. ಸುರೇಂದ್ರನಾಥ್**
**ದಿನಾಂಕ : ಮೇ 15**
**ಮೊಬೈಲ್ : 9880477460**



